# ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

E-mail- ddtp.hubli@gmail.com Phone Number: 0836-2358034


ನಂ.ಹುಧಾಮಪಾ/12/ವಿನ್ಯಾಸ/2020-21/104 ದಿನಾಂಕ: -08-2020
16-7-2021

ವಿಷಯ: ಹುಬ್ಬಳ್ಳಿ ತಾಲೂಕ ಗೋಕುಲ ಗ್ರಾಮದ ರಿ.ಸ.ನಂ.149,151,153 (ಕೆ.ಜೆ.ಪಿ ನಂತರ 149+151+153) ನೇದ್ದರ ಒಟ್ಟು ಕ್ಷೇತ್ರ 10ಎಕರೆ 18ಗುಂಟೆ ವಸತಿ ವಿನ್ಯಾಸವನ್ನು ಮಹಾನಗರ ಪಾಲಿಕೆಗೆ ಹಸ್ತಾಂತರಿಕೊಳ್ಳುವ ಕುರಿತು

ಉಲ್ಲೇಖ:1) ವಿನ್ಯಾಸ ಅನುಮೋದನೆ ಪತ್ರ ಸಂಖ್ಯೆ ಹು.ಧಾ.ನ.ಪ್ರಾ/ಯೋವಿ/ವಿನ್ಯಾಸ 24/13/1010 ದಿನಾಂಕ: 21-06-2014

2) ಹು.ಧಾ.ನ. ಪ್ರಾಧಿಕಾರದ ವಿನ್ಯಾಸಕ್ಕೆ ಮುಕ್ತಾಯ ಪ್ರಮಾಣ ಪತ್ರ ನೀಡಿದ ಆದೇಶ ಕ್ರ.ಸಂ. ಹುಧಾನಪ್ರಾ/ಅವಿ/ಗೋಕುಲ/ಖಾ.ವಿ/2018-19/3418 ದಿನಾಂಕ: 13-02-2019

3) ಶ್ರೀ. ಮಹ್ಮದಆಸೀಫ್ ತಂದೆ ನಿಜಾಮುದ್ದೀನ ದಾರೂದವಾಲೆ ಹಾಗೂ ಇತರರು, ಶಬರಿನಗರ ಹುಬ್ಬಳ್ಳಿ ಇವರ ಮನವಿ ಪತ್ರ ದಿನಾಂಕ: 20-05-2020

4) ಮಾನ್ಯ ಆಡಳಿತಾಧಿಕಾರಿಗಳ ಸಾಮಾನ್ಯ ಸಭೆಯ ದಿನಾಂಕ: 13-07-2020ರ ವಿಷಯ ಸಂಖ್ಯೆ 03 ಠರಾವು ಸಂಖ್ಯೆ: 169

DDTP ಹುಬ್ಬಳ್ಳಿ

**ಪೀಠಿಕೆ**

ಹುಬ್ಬಳ್ಳಿ ತಾಲೂಕ ಗೋಕುಲ ಗ್ರಾಮದ ರಿ.ಸ.ನಂ.149,151,153 (ಕೆ.ಜೆ.ಪಿ ನಂತರ 149+151+153) ನೇದ್ದರ ಒಟ್ಟು ಕ್ಷೇತ್ರ 10ಎಕರೆ 18ಗುಂಟೆ ವಸತಿ ವಿನ್ಯಾಸವನ್ನು ಮಹಾನಗರ ಪಾಲಿಕೆಗೆ ಹಸ್ತಾಂತರಿಸಿಕೊಳ್ಳುವ ಕುರಿತು. ಉಲ್ಲೇಖ (1) ರನ್ವಯ, ವಸತಿ ವಿನ್ಯಾಸಕ್ಕೆ ಅನುಮೋದನೆ ಅಂಗೀಕರಿಸಿರುತ್ತಾರೆ. ಹಾಗೂ ಮಹಾನಗರ ಪಾಲಿಕೆಗೆ ಹಸ್ತಾಂತರಿಸಿಕೊಳ್ಳುವ ಬಗ್ಗೆ ಆಯುಕ್ತರು ಹುಧಾನಪ್ರಾ ಹುಬ್ಬಳ್ಳಿ ಇವರು ತಿಳಿಸಿರುತ್ತಾರೆ. ಉಲ್ಲೇಖ (2) ರನ್ವಯ ಸದರಿ ವಸತಿ ವಿನ್ಯಾಸದ ಕಾಮಗಾರಿಗಳ ಬಗ್ಗೆ ಪ್ರಾಧಿಕಾರದ ಮೇಲ್ವಿಚಾರಣೆಯಲ್ಲಿ ತೃಪ್ತಿಕರವಾಗಿ ನಿರ್ವಹಿಸಿರುವುದಾಗಿ, ಪ್ರಾಧಿಕಾರದ ಮುಕ್ತಾಯ ಪ್ರಮಾಣ ಪತ್ರದಲ್ಲಿ ತಿಳಿಸಿರುತ್ತಾರೆ. ಸದರಿ ವಿನ್ಯಾಸದಲ್ಲಿ ಒಟ್ಟು 126 ವಸತಿ ನಿವೇಶನಗಳು ಇರುತ್ತವೆ. ವಿನ್ಯಾಸದಲ್ಲಿ ಇರುವ ರಸ್ತೆ ಜಾಗೆಯನ್ನು ಮಹಾನಗರ ಪಾಲಿಕೆಗೆ ಹಸ್ತಾಂತರಿಸಿದ್ದು ಮಹಾನಗರ ಪಾಲಿಕೆಯ ಕಾರ್ಯನಿರ್ವಾಹಕ ಅಭಿಯಂತರರು ಹಾಗೂ ಅಧೀಕ್ಷಕ ಅಭಿಯಂತರರು ಮತ್ತು ನಗರ ಯೋಜನಾ ಉಪ ನಿರ್ದೇಶಕರು ಸ್ಥಳ ಪರಿಶೀಲಿಸಿ ಹಸ್ತಾಂತರಿಸಿಕೊಳ್ಳಲು ಅಭಿಪ್ರಾಯ ನೀಡಿರುತ್ತಾರೆ. ಉಲ್ಲೇಖ (4) ರನ್ವಯ ದಿನಾಂಕ: 13-07-2020ರ ಮಾನ್ಯ ಆಡಳಿತಾಧಿಕಾರಿಗಳ ಸಾಮಾನ್ಯ ಸಭೆಯ ವಿಷಯ ಸಂಖ್ಯೆ 03 ಠರಾವ ನಂ. 169 ರನ್ವಯ ಅರ್ಜಿದಾರರು ರೂ. 7,03,450/- ಶುಲ್ಕವನ್ನು ಚಲನ ನಂ. 6107100 ದಿನಾಂಕ: 15-10-2020 ರಂದು ಸಿಂಡಿಕೇಟ್ ಬ್ಯಾಂಕ/ಕೆನರಾ ಬ್ಯಾಂಕ ಶಿರೂರು ಪಾರ್ಕ ಹುಬ್ಬಳ್ಳಿ ಪಾಲಿಕೆಯ ಖಾತೆಗೆ ಭರಿಸಿರುತ್ತಾರೆ. ಆದ್ದರಿಂದ ಸದರಿ ವಸತಿ ವಿನ್ಯಾಸವನ್ನು ಈ ಕೆಳಗಿನ ಕರಾರುಗಳಿಗೆ ಒಳಪಟ್ಟು ಹಸ್ತಾಂತರಿಸಿಕೊಳ್ಳಬಹುದಾಗಿರುತ್ತದೆ.

## ಹಸ್ತಾಂತರ ಪತ್ರ

ಕೆಳಕಂಡ ಕರಾರುಗಳನ್ನು ವಿಧಿಸಿ ಮಹಾನಗರ ಪಾಲಿಕೆಯ ಸಾಮಾನ್ಯ ಸಭೆಯ ನಿರ್ಣಯದಂತೆ ವಸತಿ ವಿನ್ಯಾಸವನ್ನು ಮಹಾನಗರ ಪಾಲಿಕೆಗೆ ಹಸ್ತಾಂತರಿಸಿಕೊಳ್ಳಲಾಗಿದೆ.

**ಷರತ್ತುಗಳು:**

1. ಸದರಿಯವರು ವಿನ್ಯಾಸದಲ್ಲಿ ಬರುವ ರಸ್ತೆ ಹಾಗೂ ಉಪರಸ್ತೆ ಮುಕ್ತಟ್ಟೆಯಾಗಿ ಹಸ್ತಾಂತರಿಸಿ ಆರ್.ಓ.ಆರ್ ದಲ್ಲಿ ಮಾನ್ಯ ಆಯುಕ್ತರ ಹು.ಧಾ.ಮ.ಪಾಲಿಕೆ ಅಂತಾ ದಾಖಲಿಸಿ ಉತಾರ ನೀಡಿರುತ್ತಾರೆ. ಡೀಡ್ ಆಫ್ ರಿಲೀಜ ಸಹ ನೀಡಿರುತ್ತಾರೆ.
2. ಸದರಿ ವಿನ್ಯಾಸದಲ್ಲಿ ವಿದ್ಯುತ್‌ದೀಪಗಳನ್ನು ಅಳವಡಿಸಿದ್ದು. ಪ್ರತಿಶತ 80% ರಷ್ಟು ಮನೆಗಳು ಬರುವವರೆಗೆ ವಿನ್ಯಾಸದ ಮಾಲೀಕರು ಸಂರಕ್ಷಣೆ ಮಾಡಬೇಕು.
3. ಸದರಿ ವಿನ್ಯಾಸದಲ್ಲಿ ಕೊಳವೆ ಭಾವಿಯನ್ನು ಹಾಕಿದ್ದು ಎಲ್ಲ ನಿವೇಶನದಾರರಿಗೆ ನೀರನ್ನು ಪೂರೈಸಬೇಕು. ಪ್ರತಿಶತ 80 ರಷ್ಟು ಮನೆಗಳು ಬಂದ ನಂತರ ಪಾಲಿಕೆಯು ಬೋರವೆಲ್ ಹಸ್ತಾಂತರಿಸಲು ಕೇಳಿದಾಗ ಮುಕ್ತಟ್ಟೆಯಾಗಿ ಪಂಪ್ ಸಹಿತ ಹಸ್ತಾಂತರಿಸಬೇಕು.
4. ವಿನ್ಯಾಸದಲ್ಲಿ ರಸ್ತೆಗೆ ನಾಮಫಲಕ ಹಾಕಿದ್ದು ಇವುಗಳನ್ನು ವಿನ್ಯಾಸದ ಮಾಲೀಕರು ಎಲ್ಲ ಮನೆಗಳು ಬರುವವರೆಗೆ ಸಂರಕ್ಷಣೆ ಮಾಡಬೇಕು.
5. ಸದರಿ ವಿನ್ಯಾಸದಲ್ಲಿ ಒಳಚರಂಡಿ ಕೊಳವೆ ಮಾರ್ಗವನ್ನು ಹಾಕಿದ್ದು, ಮುಂದೆ ಮುಖ್ಯ ಜಾಲವು ಹಾಯ್ದು ಹೋದಲ್ಲಿ ತಮ್ಮ ಸ್ವಂತ ಖರ್ಚಿನಿಂದ ಮುಖ್ಯ ಜಾಲಕ್ಕೆ ಜೋಡಣೆ ಮಾಡಿ ಕೊಡಬೇಕು.
6. ಸದರಿ ವಿನ್ಯಾಸದ ವಿವೇಶನದಾರರು ಒಳಚರಂಡಿ ಕೊಳವೆ ಮಾರ್ಗ ಚಾಲ್ತಿ ಆಗುವವರೆಗೆ ಎಲ್ಲ ನಿವೇಶನದಾರರು ವೈಯಕ್ತಿಕವಾಗಿ ಸೇಪ್ಟಿಕ್ ಟ್ಯಾಂಕ್ ಕಳುಹಿಸಬೇಕು.
7. ಸದರ ವಿನ್ಯಾಸದಲ್ಲಿ ನಿವೇಶನದಾರರು ಹೆಚ್ಚಿನ ಪೌರ ಸೌಲಭ್ಯವನ್ನು ಕೇಳಿದಲ್ಲಿ ವಿನ್ಯಾಸದ ಮಾಲೀಕರು ತಮ್ಮ ಸ್ವಂತ ಖರ್ಚಿನಿಂದ ಮಾಡಿಸಿಕೊಡಬೇಕು.
8. ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರವು ವಿಧಿಸಿದ ಎಲ್ಲ ಶರತ್ತುಗಳಿಗೆ ಬದ್ಧರಾಗಿರಬೇಕು.

9. ಸದರ ವಿನ್ಯಾಸದಲ್ಲಿ ಸಿವ್ಹಿಲ್ ಕಾಮಗಾರಿಗಳನ್ನು ಮುಗಿಸಿದ್ದು, ಪ್ರತಿಶತ 80% ಮನೆಗಳು ಬರುವವರೆಗೆ ವಿನ್ಯಾಸದ ಮಾಲೀಕರು ತಮ್ಮ ಸ್ವಂತ ಖರ್ಚಿನಿಂದ ದುರಸ್ತಿ ಮಾಡಬೇಕು.
10. ಸದರ ವಿನ್ಯಾಸ ಹಸ್ತಾಂತರವಾದ ನಂತರ ಯಾವುದೆ ತರಹದ ಲೆಕ್ಕ ಪರಿಶೋಧಕರಿಂದ ಆಕ್ಷೇಪಣೆಗಳು ಬಂದಲ್ಲಿ ಸದರ ಆಕ್ಷೇಪಣೆಗೆ ತಗಲಬೇಕಾದ ವೆಚ್ಚವನ್ನು ವಿನ್ಯಾಸದ ಮಾಲೀಕರೇ ಭರಿಸಬೇಕಾಗುತ್ತದೆ ಈ ಬಗ್ಗೆ ಮುಚ್ಚಳಿಕೆ ಪತ್ರ ನೀಡಬೇಕು.
11. ಸದರ ವಿನ್ಯಾಸದಲ್ಲಿ ಎಲ್ಲ ನಿವೇಶನದಾರರಿಗೆ ನೀರು ಸರಬರಾಜು ಕುರಿತು ಬೋರವೆಲ್ ಹಾಕಿದ್ದು, ಎಲ್ಲ ಮನೆಗಳಿಗೆ ತೃಪ್ತಿಕರವಾಗಿ ನೀರು ಸರಬರಾಜು ಮಾಡತಕ್ಕದ್ದು.
12. ಸದರಿ ವಿನ್ಯಾಸಕ್ಕೆ ಸಂಬಂಧಿಸಿದಂತೆ ಪರಿಶೋಧನಾ ಶುಲ್ಕ, ವಿದ್ಯುತ್ ಸಂಪರ್ಕ ಶುಲ್ಕ, ಸ್ಟೀಲ್ ಕಂಟೇನರ್ ಶುಲ್ಕ ಪ್ಲಾಟ ಫಾರ್ಮ ಶುಲ್ಕ, ಟ್ರಿ ಹಾಗೂ ಟ್ರಿಗಾರ್ಡ ಶುಲ್ಕ, ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಜಲಮಂಡಳಿರವರು ತಿಳಿಸಿರುವಂತೆ ನೀರು ಬಳಕೆದಾರರಿಂದ ಪ್ರೋರೇಟಾ ಶುಲ್ಕ; ಇತರೆ ಶುಲ್ಕ / ಫೀ ಯನ್ನು ಪಾಲಿಕೆಯು ನಿಗದಿ ಪಡಿಸಿದ ಚಾಲ್ತಿ ಸಾಲಿನ ದರದಂತೆ ಭರಿಸಬೇಕಾಗುತ್ತದೆ.

16/7/2021

ಆಯುಕ್ತರು
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ
ಹುಬ್ಬಳ್ಳಿ

**ಪ್ರತಿಗಳು:-**

1) ಆಯುಕ್ತರು ಹು-ಧಾ ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ ಇವರಿಗೆ ಅಭಿನಂದನೆಗಳೊಂದಿಗೆ ಮಾಹಿತಿಗಾಗಿ
2) ಅಧೀಕ್ಷಕ ಅಭಿಯಂತರರು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ ಇವರಿಗೆ ಅಭಿನಂದನೆಗಳೊಂದಿಗೆ ಮಾಹಿತಿಗಾಗಿ
3) ಕಾರ್ಯನಿರ್ವಾಹಕ ಅಭಿಯಂತರರು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ ಇವರಿಗೆ ಅಭಿನಂದನೆಗಳೊಂದಿಗೆ ಮಾಹಿತಿಗಾಗಿ
4) ಕಾರ್ಯನಿರ್ವಾಹಕ ಅಭಿಯಂತರರು, ಕರ್ನಾಟಕ ಜಲ ಮಂಡಳಿ (ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ) ಹುಬ್ಬಳ್ಳಿ ಇವರಿಗೆ ಮಾಹಿತಿಗಾಗಿ
5) ಕಾರ್ಯ ನಿರ್ವಾಹಕ ಅಭಿಯಂತರರು, ವಿದ್ಯುತ್ ವಿಭಾಗ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ ಇವರಿಗೆ ಅಭಿನಂದನೆಗಳೊಂದಿಗೆ ಮಾಹಿತಿಗಾಗಿ
6) ಸಹಾಯಕ ಆಯುಕ್ತರು, ವಲಯ ಕಚೇರಿ ಸಂಖ್ಯೆ 07 ಸದರಿ ವಸತಿ ವಿನ್ಯಾಸದಲ್ಲಿನ ಎಲ್ಲ ನಿವೇಶನಗಳಿಗೆ ಸಂಬಂಧಪಟ್ಟ ಶುಲ್ಕವನ್ನು ಪಾವತಿಸಿಕೊಂಡ ನಂತರ ಖಾತೆಯನ್ನು ತೆರೆಯತಕ್ಕದ್ದು
7) ಕಾರ್ಯಪಾಲಕ ಅಭಿಯಂತರರು, ತೋಟಗಾರಿಕೆ ವಿಭಾಗ, ಹು.ಧಾ.ಮ.ಪಾಲಿಕೆ, ಹುಬ್ಬಳ್ಳಿ ಇವರಿಗೆ ಮಾಹಿತಿಗಾಗಿ
8) ಶ್ರೀ. ಮಹ್ಮದಆಸೀಪ್ ತಂದೆ ನಿಜಾಮುದ್ದೀನ ದಾರೂದವಾಲೆ ಹಾಗೂ ಇತರರು, ಶಬರಿನಗರ ಹುಬ್ಬಳ್ಳಿ, ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.